ಶ್ರೀ ಜೆ. ಹೆಚ್. ಪಟೀಲ್, (ಕೈಗಾರಿಕೆ ಪಶಿತ್ತು ವಿದ್ಯುತ್ ಸಚಿವರು).—

ಅ) ಯಂ.ಕೆ.ಯು ಓವರ್‌ಸೀಸ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್‌ನಿಂದ ೧೦೧೮.೯೬ ಲಕ್ಷ ರೂ.ಗಳ ನೆರವು ದೊರೆತಿದೆ.

ಆ) ೭೫,೦೦೦ ಎಕರೆಗಳು

(೩೦,೦೦೦ ಹೆಕ್ಟೇರುಗಳು)

ಇ) ಸದರಿ ಯೋಜನೆಗೆ ಕೇಳಲಾಗಿರುವ ಮತ್ತು ಕೊಡಮಾಡಿದ ಜಮೀನನ್ನು ಈ ಕೆಳಗಿನಂತಿದೆ.

ಶಿವಮೊಗ್ಗ ಜಿಲ್ಲೆ	೨೪,೪೦೦ ಹೆಕ್ಟೇರು
ಚಿಕ್ಕಮಗಳೂರು ಜಿಲ್ಲೆ	೫,೬೦೦ ಹೆಕ್ಟೇರು

ಈ) ಇಲ್ಲ.

ಹೊಳೆದಂಡೆಯ ಮೇಲಿನ ಎಲ್ಲಾ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸುವ ಬಗ್ಗೆ.

೫೬೫. ಶ್ರೀ ಕೆ.ಟಿ. ಕ್ಕೋಳಿವಾಡ, (ರಾಣೆಬೆನ್ನೂರು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿಯ ಹೊಳೆಯ ದಂಡೆಯ ಮೇಲಿರುವ ಎಲ್ಲಾ ಪಂಪುಸೆಟ್ಟುಗಳಿಗೆ ಫೆಬ್ರುವರಿ ಒಂದರಿಂದ ಜೂನ್ ಒಂದರವರೆಗೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅದರ ಉದ್ದೇಶವೇನು.

ಇ) ಧಾರವಾಡ ಜಿಲ್ಲೆಯಲ್ಲಿ ಕುಡಿಯಲಿಂವ ನೀರಿನ ಕೊರತೆ ಇಲ್ಲದ ಕಾರಣ ಅಲ್ಲಿ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಬಾರದೆಂದು ಜಿಲ್ಲಾ ಪರಿಷತ್ತು ನಿರ್ಣಯವೊಂದನ್ನು ಅನುಮೋದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಸದರಿ ನಿರ್ಣಯದ ಬಗ್ಗೆ ಸರ್ಕಾರದ ನಿಲುವೇನು ?

ಲಕ್ಷ್ಮೀರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮತ್ತು ಆ) ಅನೇಕ ಗ್ರಾಮಗಳು ಮತ್ತು ನಗರಗಳು ಮತ್ತು ದೊಡ್ಡ ಪಟ್ಟಣಗಳೂ ಸಹ ಬೆಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯಮಟ್ಟದ ಸಣ್ಣ ನೀರಾವರಿ ಸಮನ್ವಯ ಸಮಿತಿಯ ಸಭೆಯಲ್ಲಿ, ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರುವರಿಯಿಂದ ಜೂನ್ ಕೊನೆಯವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇಧಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳು ಮತ್ತು ನಗರಗಳಿಗೆ ಕುಡಿಯುವ ನೀರಿನ ಅಭಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪು ಸೆಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸಂತ್ರೋಲೆಯಲ್ಲಿ ಸೂಚನೆ ಕೊಡಲಾಯಿತು.

ಇ) ಮತ್ತು ಈ) ರೈತರಿಗೆ ಅನಾನುಕೂಲವಾಗುತ್ತದೆಂದು ಮನವಿಗಳು ಬಂದಿರುವುದರಿಂದ ಮತ್ತು ಕುಡಿಯುವನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿದಂಡೆಗಳ ಮೇಲಿನ ನೀರಾವರಿ ಪಂಪುಸೆಟ್ಟುಗಳಿಗೆ ೧೯೯೬ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.